ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ 19/2018**

ಸಿ.ಡಬ್ಲ್ಯೂ -10 ಪಿ.ಡಬ್ಲ್ಯೂ -7

ದಿಃ 19.03.2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಡಾ. ಕೆ.ಎಸ್.ವಾಣಿ |
| ಗಂಡನ ಹೆಸರು | ಸಂಪತ್ ಕುಮಾರ |
| ವಯಸ್ಸು | ಸುಮಾರು 56 ವರ್ಷ |
| ಕೆಲಸ | ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಹುಣಸೂರು |
| ವಾಸಸ್ಥಳ | ಮೈಸೂರು |

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ20-08-2010 ರಿಂದ ಇಲ್ಲಿಯವರೆಗೆ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ08.11.2017 ರಂದು ಬೆಳಿಗ್ಗೆ 9.15 ರ ಸಮಯದಲ್ಲಿ ಹಲ್ಲೆಯ ಹಿನ್ನೆಲೆಯಲ್ಲಿ ಚಾಸಾ-2 ರಿಂದ 4 ರವರು ಆಸ್ಪತ್ರೆಗೆ ಭೇಟಿ ನೀಡಿರುತ್ತಾರೆ. ಸದರಿಯವರನ್ನು ತಪಾಸಣೆ ಮಾಡಿದಾಗ ಚಾಸಾ-4 ರವರಿಗೆ 1) ಎಡತೋಡೆಯ ಮಧ್ಯಭಾಗದಲ್ಲಿ 4X1 ಸೆ.ಮೀ ರಕ್ತ ಹೆಪ್ಪುಗಟ್ಟಿದ ಗಾಯವಾಗಿತ್ತು, 2) ಎಡ ಹೆಬ್ಬರಳಿನ ಮೇಲೆ ಪರಚಿದ ಗಾಯ, 3) ಎದೆಗೆ ಒಳಪೆಟ್ಟು ಬಿದ್ದಿತ್ತು. ಸದರಿಯವರಿಗೆ ಮೂಳೆಯ ತಜ್ಞರ ಬಳಿ ಹೆಚ್ಚಿನ ತಪಾಸಣೆಗೆ ಒಳಪಡಿಸಿರುತ್ತೇನೆ. ಈ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

ಚಾಸಾ-2 ರವರನ್ನು ತಪಾಸಣೆ ಮಾಡಿದಾಗ 1) ಮೇಲು ತುಟಿಯಲ್ಲಿ ಕತ್ತರಿಸಿದ ಗಾಯವಿತ್ತು, 2) ಬಲಭಾಗದ ಹೊಟ್ಟೆಯ ಮೇಲೆ 0.5X0.5 ಸೆ.ಮೀ ತೆರಚಿದ ಗಾಯವಾಗಿತ್ತು. ದಂತ ವೈದ್ಯರಿಂದ ವರದಿಯನ್ನು ಪಡೆದ ನಂತರ ಸದರಿಯವರು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆಂದು ವರದಿ ನೀಡಿರುತ್ತಾರೆ.

ಚಾಸಾ-3 ರವರನ್ನು ತಪಾಸಣೆ ಮಾಡಿದಾಗ 1) ಬಲಬೆನ್ನಿನ ಮೇಲ್ಭಾಗದಲ್ಲಿ ಊತವಿತ್ತು, ಕೈ ಮೇಲೆತ್ತಲು ಆಗುತ್ತಿರಲಿಲ್ಲ. ಸದರಿಯವರಿಗೆ ಮೂಳೆಯ ತಜ್ಞರ ಬಳಿ ಹೆಚ್ಚಿನ ತಪಾಸಣೆಗೆ ಒಳಪಡಿಸಿರುತ್ತೇನೆ. ಈ ಮೇಲೆ ಹೇಳಿದ ಗಾಯ ತೀವ್ರ ಸ್ವರೂಪದ್ದಾಗಿರುತ್ತದೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರಗಳನ್ನು ತೋರಿಸಿದ್ದು,

ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ರಿಂದ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ರಿಂದ 5(ಎ) ಎಂದು ಗುರುತಿಸಲಾಯಿತು. ಮು.ಮಾ-1 ಮತ್ತು 2 ರಿಂದ ಹಲ್ಲೆ ಮಾಡಿದಾಗ ಈ ಮೇಲೆ ಹೇಳಿದ ನಿಪಿ-3 ರಿಂದ 5 ಗಾಯಗಳು ಆಗುವ ಸಂಭವ ಇರುತ್ತದೆ. ಪೊಲೀಸರು ದಿಃ 06.12.2017 ರಂದು ನನ್ನ ಸಮಕ್ಷಮ ಮು.ಮಾ-1 ಮತ್ತು 2 ನ್ನು ಹಾಜರುಪಡಿಸಿದ್ದು, ನಾನು ಪೊಲೀಸರಿಗೆ ನಿಪಿ-3 ರಿಂದ 5 ಗಾಯಗಳು ಆಗುವ ಸಂಭವ ಇರುತ್ತದೆಂದು ನನ್ನ ಮುಂದುವರೆದ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಗೆ ಮುಂದುವರೆದ ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್.ಪಿ. ವಕೀಲರಿಂದಃ**

ಸಾಮಾನ್ಯವಾಗಿ ಎತ್ತಿನಗಾಡಿಯಲ್ಲಿ ಹೋಗಬೇಕಾದರೆ ಗಾಡಿ ಪಲ್ಟಿಯಾಗಿ, ಗಾಡಿಯಿಂದ ಮುಳ್ಳಿನ ಪೋದೆಗಳ ಮೇಲೆ ಬಿದ್ದಾಗ ನಿಪಿ-3 ರಿಂದ 5 ರಲ್ಲಿ ಹೇಳಿರುವ ಪರಚಿದ ಗಾಯಗಳು ಆಗುವ ಸಂಭವ ಇರುತ್ತವೆಂದರೆ ಸರಿ. ಯಾವುದೇ ವ್ಯಕ್ತಿ ಗಾಡಿಯಿಂದ ಬಿದ್ದಾಗ ನಿಪಿ-3 ರಿಂದ 5 ರಂತೆ ಇನ್ನಿತರ ಗಾಯಗಳು ಆಗುವ ಸಂಭವ ಇರುತ್ತದೆಂದರೆ ಸಾಕ್ಷಿ ಗಟ್ಟಿಯಾದ ಸ್ಥಳದ ಮೇಲೆ ಬಿದ್ದಾಗ ಆಗುವ ಸಂಭವ ಇರುತ್ತದೆ ಎಂದು ಹೇಳುತ್ತಾರೆ.

ದಿಃ 08.11.2017 ರಂದು ನಿಮ್ಮ ಕೆಲಸ ವೇಳಾಪಟ್ಟಿ ಏನು ಎಂದರೆ ಸಾಕ್ಷಿ ಬೆಳಿಗ್ಗೆ 9.00 ರಿಂದ ಸಂಜೆ 4.30 ಎಂದು ಹೇಳುತ್ತಾರೆ. ಆಸ್ಪತ್ರೆಯಿಂದ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ಅರ್ಧ ಕಿ.ಮೀ ದೂರದಲ್ಲಿದೆ ಎಂದರೆ ಸರಿ. ಯಾವುದೇ ಎಂ.ಎಲ್.ಸಿ ಪ್ರಕರಣ ಬಂದಾಗ ಸಂಬಂಧಪಟ್ಟ ಠಾಣೆಗೆ ವರದಿ ಮಾಡುತ್ತಿರಿ ಎಂದರೆ ಸಾಕ್ಷಿ ಇಲ್ಲ, ಹುಣಸೂರು ಪಟ್ಟಣ ಪೊಲೀಸ್ ಠಾಣೆಗೆ ನಾವು ತಿಳಿಸುತ್ತೇವೆ, ಅವರು ಸಂಬಂಧಪಟ್ಟ ಠಾಣೆಗೆ ತಿಳಿಸುತ್ತಾರೆ ಎಂದು ಹೇಳುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವು ಹುಣಸೂರು ಪಟ್ಟಣ ಪೊಲೀಸ್ ಠಾಣೆಗೆ ವರದಿ ನೀಡಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ವರದಿ ನೀಡಿರುವ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸಾಕ್ಷಿ ದಾಖಲಾತಿ ತಂದಿಲ್ಲ, ಆದರೆ ಇದೆ ಎಂದು ಹೇಳುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹುಣಸೂರು ಗ್ರಾಮಾಂತರ ಅಥವಾ ಪಟ್ಟಣ ಪೊಲೀಸ್ ಠಾಣೆಯವರು ನಿಮ್ಮ ಸಮಕ್ಷಮ ಗಾಯಾಳುಗಳ ಹೇಳಿಕೆ ಪಡೆದಿದ್ದರಾ

ಎಂದರೆ ಸಾಕ್ಷಿ 6 ವರ್ಷವಾದ್ದರಿಂದ ಈಗ ನೆನಪಿಲ್ಲ ಎಂದು ಹೇಳುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹುಣಸೂರು ಪಟ್ಟಣ ಪೊಲೀಸ್ ಠಾಣೆಗೆ ಎಂ.ಎಲ್.ಸಿ ವರದಿ ನೀಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ವರದಿ ನೀಡಿಲ್ಲದೇ ಇದ್ದುದ್ದರಿಂದ, ಹುಣಸೂರು ಗ್ರಾಮಾಂತರ ಅಥವಾ ಪಟ್ಟಣ ಪೊಲೀಸ್ ಠಾಣೆಯವರು ಬಂದು ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸಾಕ್ಷಿ 6 ವರ್ಷವಾದ್ದರಿಂದ ಈಗ ನೆನಪಿಲ್ಲ ಎಂದು ಹೇಳುತ್ತಾರೆ.

ನಿಪಿ-6 ರಂತೆ ಪೊಲೀಸರು ನಿಮ್ಮ ಸಮಕ್ಷಮ ಮು.ಮಾ-1 ಮತ್ತು 2 ನ್ನು ಹಾಜರುಪಡಿಸಿ ವರದಿ ಪಡೆದಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮು.ಮಾ-3 ರಿಂದ 6 ನ್ನು ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ವರದಿ ನೀಡಿರುತ್ತೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು